Government of Karnataka

Order No.: ED 360 UBV 2017

Government of Karnataka
Multi Storey Building,
Bangalore, Dated: 29.07.2017

From
Principal Secretary to Government,
Department of Higher Education,
Multi Storey Building,
Bangalore - 560 001.

To
The Chancellor,
Bangalore University,
Jnanabharathi,
Bangalore - 560 056.

Sub: - 2017-18 AY International School of Management Excellence at Chembenahalli, Sarjapura Hobli, Anekal Taluk regarding new affiliation.

Ref: - Reference letter No: 03.06.2017. ACA-3: A3: No.:14:2017-18, dated 03.06.2017.

1) N.V.T. Quality Education Trust, CAP-1, EPIP, Near ITPL, Whitefield, Bangalore - 560066 "International School of Management Excellence", S.Y. No.89,88, Chembenahalli, Sarjapura Hobli, Anekal Taluk, Bangalore City District-562 125 Herein, from the academic year 2017-18 the application submitted to Bangalore University seeking incorporation to start a fresh college, following the recommendation of Syndicated with the report of the Local Inquiry Committee of Bangalore University and consultation with the Academic Council reviewed.

2) In exercise of the powers conferred under sub-section (11) of section 59 of the Karnataka State Universities Act, the above college is hereby authorized to grant the following degree and P.G. Diploma courses recommendation of the Government to sanction the combination commencing from the academic year 2017-18 with the Diploma courses and the subject group and student body as set out below.

| Course | Combination | Intake |
|---|---|---|
| BBA | As Per BU Regulation | 120 (Hundred twenty) |
| PG Diploma in | Business Administration<br>Human Recourse Management<br>Marketing Management | 40 (Forty)<br>40 (Forty)<br>40 (Forty) |

**CONDITIONS:-**

1) **The College shall not make any provision in the grant code applicable to the above course. It shall be treated as permanent unaided course.**
2) **In order to be subject to permanent non-subsidy clause, the organization must strictly adhere to the provisions of the Interim Contract Agreement.**

3) The above Colleges shall sanction any grant without prejudice to the provisions of the Bangalore University Regulations.
4) Students should not be admitted in excess of the prescribed number of students.
5) Strictly follow the prevailing government regulations, orders and university rules, regulations etc.
6) Every condition imposed by the Local Inquiry Committee should be strictly followed.
7) The College/Governing Board shall fix 50 per cent University Quota (wherever applicable) as per University Regulations and shall charge only such fee as may be fixed by the University from time to time and shall not charge any amount other than the fee/amount fixed by the University.
8) Date: 13-8-1997 In the case of Visakha v/s Government of Rajasthan, the Supreme Court held that any person/student causing riot or sexually harassing women in a college is a cognizable offence. Cancellation of access; and legal action shall be taken against that person/student; Further, the College/Governing Board shall constitute a Grievance Committee as per the order of the Supreme Court; Actions should be taken to control such activities;
9) The college should conduct a good course for the development of the students; The Principal/Governing Board of the College shall treat the student/teaching staff in a friendly manner.
10) The Governing Body of the College shall not unduly withhold the marks or other records of any student until the University approves the admission of the student or beyond a period of 6 months, whichever is earlier.
11) If any student has applied for a transfer certificate to the governing body of the college, the student shall not be disturbed while issuing the same and they will be charged tuition fees only for the outstanding academic year/semester period and not any other amount.
12) *Capitation fee shall not be received in any form.*
13) Roster system should be strictly followed in admission.

By Order of Registrar

**(M.A. Ahmed John)**
Under Secretary to Government,
Department of Higher Education (Universities-2).

To:-
1) Commissioner/Director of College Education, Bangalore-560 001.
2) Regional Joint Director of College Education, Bangalore.
3) President, N.V.T. Quality Education Trust, CAP-1, EPIP, Near ITPL, Whitefield, one-560066.
4) The Principal, International School of Management Excellence, S.Y., No.89, 88, Chembenahalli, Sarjapura Hobli, Anekal Taluk, Bangalore City District-562 125.

International School of Management Excellence ★ Bangalore

PRINCIPAL
INTERNATIONAL SCHOOL OF MANAGEMENT EXCELLENCE
Sy. No.88, Chembanahalli, Near Dommasanadra Circle,
Sarjapur Road, Bangalore 562 125 INDIA

Govt. order
Original

ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 360 ಯುಬಿವಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 29.07.2017

INTERNATIONAL SCHOOL OF MANAGEMENT EXCELLENCE Bangalore

ಇಂದ
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
ಉನ್ನತ ಶಿಕ್ಷಣ ಇಲಾಖೆ,
ಬಹು ಮಹಡಿಗಳ ಕಟ್ಟಡ,
**ಬೆಂಗಳೂರು – 560 001.**

ಇವರಿಗೆ
**ಕುಲಸಚಿವರು,**
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ,
ಬೆಂಗಳೂರು – 560 056.

ಮಾನ್ಯರೆ,

**ವಿಷಯ:–** 2017–18ನೇ ಶೈಕ್ಷಣಿಕ ಸಾಲಿಗೆ ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಚಂಬೇನಹಳ್ಳಿಯಲ್ಲಿರುವ **ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್** ಎಕ್ಸಲೆನ್ಸ್‌ಗೆ ಹೊಸ ಸಂಯೋಜನೆ ನೀಡುವ ಬಗ್ಗೆ.

**ಉಲ್ಲೇಖ:–** ತಮ್ಮ ಪತ್ರ ಸಂಖ್ಯೆ: ಎಸಿಎ–3:ಎ3:ಹೊಕಾಪ್ರ:14:2017–18, ದಿನಾಂಕ 03.06.2017.

---

1) **ಎನ್.ವಿ.ಟಿ. ಕ್ವಾಲಿಟಿ ಎಜುಕೇಷನ್ ಟ್ರಸ್ಟ್, ಸಿಎಪಿ–1, ಇಪಿಐಪಿ, ಐಟಿಪಿಎಲ್ ಹತ್ತಿರ, ವೈಟ್‌ಫೀಲ್ಡ್, ಬೆಂಗಳೂರು – 560066** ಇವರು **ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್, ಎಸ್.ವೈ. ನಂ.89,88, ಚಂಬೇನಹಳ್ಳಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ –562 125** ಇಲ್ಲಿ 2017–18ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಸ್ಥಾಪಿಸಿ ಪ್ರಾರಂಭಿಸಲು ಸಂಯೋಜನೆ ಕೋರಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾವಿಷಯಕ ಪರಿಷತ್‌ನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಮಾಡಿರುವ ಶಿಫಾರಸ್ಸನ್ನು ಆದರಿಸಿ ಸಂವೀಕ್ಷಿಸಲಾಗಿದೆ.

2)ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 59ನೇ ಪ್ರಕರಣದ (11)ನೇ ಉಪಪ್ರಕರಣದಡಿ ನೀಡಿರುವ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಕಾಲೇಜನ್ನು ಈ ಕೆಳಕಂಡ ಪದವಿ ಮತ್ತು ಪಿ.ಜಿ. ಡಿಪ್ಲೊಮಾ ಕೋರ್ಸುಗಳು ಮತ್ತು ಕೆಳಗೆ ನಿಗದಿಪಡಿಸಿರುವ ವಿಷಯ ಸಮೂಹ ಮತ್ತು ವಿದ್ಯಾರ್ಥಿ ಪ್ರಮಾಣದೊಂದಿಗೆ 2017–18ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಂಯೋಜನೆಯನ್ನು ಮಂಜೂರು ಮಾಡುವಂತೆ ಸರ್ಕಾರದ ಶಿಫಾರಸ್ಸನ್ನು ತಿಳಿಸಲು ನಿರ್ದೇಶಿತನಾಗಿದ್ದೇನೆ.

| ಕ್ರಮ ಸಂಖ್ಯೆ | ಕೋರ್ಸು | ಭಾಷೆಗಳು | ವಿದ್ಯಾರ್ಥಿ ಪ್ರಮಾಣ |
|---|---|---|---|
| 1 | ಬಿ.ಬಿ.ಎ. | ವಿ.ವಿ. ಪರಿನಿಯಮಾವಳಿಯಂತೆ | **120 (ಒಂದು ನೂರು ಇಪ್ಪತ್ತು)** |
| 2 | ಪಿ.ಜಿ. ಡಿಪ್ಲೊಮಾ ಇನ್ | ಬಿಸಿನೆಸ್ ಅಡ್ಮಿನಿಸ್ಟ್ರೇಷನ್<br>ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್<br>ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ | **40 (ನಲವತ್ತು)**<br>**40 (ನಲವತ್ತು)**<br>**40 (ನಲವತ್ತು)** |

ಷರತ್ತುಗಳು:–

1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು;
2) ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಡಲು ಸಂಸ್ಥೆಯು ಮಧ್ಯಂತರ ಕರಾರು ಒಪ್ಪಂದ ಪತ್ರದಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
3) ಮೇಲ್ಕಂಡ ಕಾಲೇಜು ಬೆಂಗಳೂರು ವಿಶ್ವವಿದ್ಯಾಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

..2

4) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

5) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

6) ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

7) ಕಾಲೇಜು/ಆಡಳಿತ ಮಂಡಳಿಯು ಶೇ.50 ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು, ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

8) ದಿನಾಂಕ: 13-8-1997 ರಂದು ವಿಶಾಖ v/s ರಾಜಸ್ತಾನ ಸರ್ಕಾರ ಮೊಕದ್ದಮ್ಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರೀಂ ಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;

9) ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸ್‌ನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಲಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

10) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾಲಯವು ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;

11) ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.

12) ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.

13) ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ತಮ್ಮ ನಂಬುಗೆಯ,

(ಎಂ.ಎ. ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2).

ಪ್ರತಿ:-

1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001.
2) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು.
3) **ಅಧ್ಯಕ್ಷರು, ಎನ್.ವಿ.ಟಿ. ಕ್ವಾಲಿಟಿ ಎಜುಕೇಷನ್ ಟ್ರಸ್ಟ್, ಸಿಎಪಿ-1, ಇಪಿಐಪಿ, ಐಟಿಪಿಎಲ್ ಹತ್ತಿರ, ವೈಟ್‌ಫೀಲ್ಡ್, ಬೆಂಗಳೂರು -560066.**
4) **ಪ್ರಾಂಶುಪಾಲರು, ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಲೆನ್ಸ್, ಎಸ್.ವೈ. ನಂ.89,88, ಚೆಂಬೇನಹಳ್ಳಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ -562 125.**